SRI SUBASH ASTURE.— May be.

ಶ್ರೀ ಟಿ. ಆರ್. ಶಾಮಣ್ಣ.—ಈಗ ಅನೇಕ ಬೋರ್ಡ್‌ಗಳು ಸ್ಥಾಪನೆಯಾಗಿದ್ದರೂ ಕೂಡ ಆ ಬೋರ್ಡ್‌ಗಳು ಯಾವುದೇ ಕೆಲಸವನ್ನು ಮಾಡದೇ, ಆವರಿಗೆ ಸಂಬಳ ಸಾರಿಗೆಗಳನ್ನು ಕೊಟ್ಟು ಕೊಂಡು ಅನೇಕ ತಿಂಗಳುಗಳಿಂದ ಬೋರ್ಡ್‌ಗಳು ನಿದ್ದೆ ಮಾಡುತ್ತಾ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬೆಂಗಳೂರು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ನಿರ್ಮಾಣವಾಗಿ 7 ತಿಂಗಳಾದರೂ ಬರೇ ದುಡ್ಡು ಖರ್ಚಾಗಿದೆಯೇ ಹೊರತು ಯಾವ ಕೆಲಸವೂ ಆಗಿಲ್ಲ.

ಇದರ ಬಗ್ಗೆ ನಿವರ್ತನೆಗಳು ಇವೆ. ಈ ಬೋರ್ಡುಗಳನ್ನು ಸೃಷ್ಟಿ ಮಾಡುವುದಕ್ಕೆ ಬದಲಾಗಿ ಯಾವುವಾದರೂ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ನುಭಾಷ್ ಅಸ್ತೂರೆ.—ಯಾವುದೇ ಬೋರ್ಡ್ ಸ್ಥಾಪನೆ ಮಾಡಿದರೂ ಅವರ ಕೆಲಸ ಇದ್ದೇ ಇರುತ್ತದೆ. ಅವು ಕೆಲಸ ಮಾಡುತ್ತಿವೆ. ಅನೇಕ ಬೋರ್ಡ್‌ಗಳನ್ನು ಸ್ಥಾಪನೆ ಮಾಡಿದ್ದರೂ ಅವು ತಮ್ಮ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತಿವೆ ಅವುಗಳ ಫಂಡ್ಸ್ ಯಾವ ಒಂದು ಉದ್ದೇಶಕ್ಕೆ ಖರ್ಚಾಗಬೇಕೋ ಆ ಉದ್ದೇಶಕ್ಕೆ ಅದು ಖರ್ಚಾಗುತ್ತದೆ. ಫಂಡ್ಸ್‌ನ್ನು ನುಮ್ಮನೆ ಖರ್ಚು ಮಾಡುತ್ತಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.— ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದಾರೆ. ಅದರ ಅಧಿಕಾರ ವ್ಯಾಪ್ತಿಯಲ್ಲಿ ಕೆ.ಆರ್.ಎಸ್., ಹೇಮಾವತಿ, ಹಾರಂಗಿ, ಕಬಿನಿ ಪ್ರಾಜೆಕ್ಟ್‌ಗಳ ಅಚ್ಚುಕಟ್ಟು ಏರಿಯಾದೆಲ್ಲ ಬರುತ್ತದೆಯೆಂದು ತಿಳಿಸಿದ್ದೀರಿ. ಈ ಬೋರ್ಡ್‌ಗೆ ಸಂಬಂಧಪಟ್ಟ ಹಾಗೆ ಎಷ್ಟು ದುಡ್ಡನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ? ಎಷ್ಟು ಹಣ ಹೇಮಾವತಿ ಪ್ರಾಜೆಕ್ಟ್‌ಗೆ ಖರ್ಚಾಗಿದೆ? ಕಮಾಂಡ್ ಏರಿಯಾ ಡೆವೆಲಪ್‌ಮೆಂಟ್ ಬೋರ್ಡ್ ಏನೇನು ಕೆಲಸ ಮಾಡಿದೆ? ಕಮಾಂಡ್ ಏರಿಯಾ ಡೆವಲಪ್ ಆಗಿದೆಯೇ?

ಶ್ರೀ ನುಭಾಷ್ ಅಸ್ತೂರೆ.— ಕಮಾಂಡ್ ಏರಿಯಾ ಡೆವೆಲಪ್‌ಮೆಂಟ್‌ಗೋಸ್ಕರ ಪ್ರತ್ಯೇಕ ಬಡ್ಜೆಟ್ ಇಲ್ಲದೇಹೋದರೂ ಯಾವುದೇ ಡಿಸ್ಟ್ರಿಕ್ಟ್‌ನಲ್ಲಾಗಲೀ, ತಾಲ್ಲೂಕಿನಲ್ಲಾಗಲೀ, ತಾಲ್ಲೂಕು ಅಥವಾ ಡಿಸ್ಟ್ರಿಕ್ಟ್ ಏರಿಯಾ ಕಮಾಂಡ್ ಏರಿಯಾದಲ್ಲಿ ಬರುತ್ತದೆ. ಆದರ ನುಬಾವಾಗಿ ಎಷ್ಟು ಹಣ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಿಂದ, ಅದು ಅಗ್ರಿಕಲ್ಚರಲ್ ಆಗಲಿ, ಫಿಷರೀಸ್ ಡಿಪಾರ್ಟ್‌ಮೆಂಟ್ ಆಗಲೀ ಈ ರೀತಿ ಎಷ್ಟು ಹಣ ಖರ್ಚು ಮಾಡಬೇಕೋ ಆ ಹಣವನ್ನೆಲ್ಲಾ ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಮತಿಯಿಂದ ಖರ್ಚು ಮಾಡುತ್ತಾರೆ.

## Constitution of Seed Corporation

525 SMT. VIJAYA DESAI (Chitapur) — Will the Minister for Agriculture and Animal Husbandry be pleased to state.—

(*a*) when the Seed Corporation has been constituted in the State;

(*b*) the quantity of Groundnut, Tavar or Bajra Seeds Supplied to Gulbarga District through this Corporation (Taluk-wise figures may be furnished);

(*c*) the number of individuals who received seeds worth Rs 1000 and more in the said district;

(*d*) the action taken by the Government for the recovery for the said amount?

SRI N. CHIKKE GOWDA (Minister for Agriculture and Animal Husbandry).—

(*a*) The Karnataka Agro-Seeds Corporation was registered with the Registrar of Companies under the Companies Act on 8th August, 1973. The Board of Directors of the Company by a Resolution dated 1st September 1973 resolved to start functioning of the Company.

(*b*), (*c*) and (*d*) : The Karnataka Agro-Seeds Corporation did not participate in the procurement and distribution of seeds in the drought-affected areas during the year 1973.

SRI PRABHAKAR TELKAR.— To question (b) the reply is in the nagative. Whether it is a fact that during 1973 and 1974 thg Government has supplied seeds to people in Gulbarga district durine drought period?

†SRI N. CHIKKE GOWDA.— The reply to (b) is in negative because this is a separate organisation; the Karnataka Agro Seeds Corporation and the Karnataka Seeds Marketing Federation are two separate organisations. The Karnataka Seeds Marketing Federation was formed specially for meeting the demands and the needs of the farmers for supply of seeds and other inputs in drought areas. The Karnataka Seeds Marketing Federation was established in Gulbarga, Bidar and other places.

SRI PRABHAKAR TELKAR.— Will the Government supply the information called for under (b)?

SRI N. CHIKKE GOWDA.— The question is specific and I have furnished the reply. If a separate question is put, I will furnish the answer.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ಈ ಬರಗಾಲಪೀಡಿತ ಪ್ರದೇಶಕ್ಕೆ ಬಿತ್ತನೆ ಬೀಜವನ್ನು ಒದಗಿಸುವ ದೃಷ್ಟಿಯಿಂದ ಸೀಡ್ ಕಾರ್ಪೊರೇಷನ್ ಸ್ಥಾಪನೆಯಾಗಿದೆಯೆಂದು ತಿಳಿಸಿದ್ದೀರಿ. ಆ ಬರಗಾಲದ ಅವಧಿ ಮುಗಿಯಿತು. ಆ ಅವಧಿ ಮುಗಿದ ಮೇಲೆ ಸೀಡ್ ಕಾರ್ಪೊರೇಷನ್ ಕೆಲಸ ಮಾಡುತ್ತಾ ಇಲ್ಲವೇ? ಇದು ಕೆಲಸ ಮಾಡುತ್ತಾ ಇದ್ದರೆ ಯಾವ ಒಂದು ಡೈರೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದೆ? ಅದೂ ಅಲ್ಲದೆ ಅಗ್ರೋ ಇಂಡಸ್ಟ್ರೀಸ್ ಸಹ ಕೆಲಸಮಾಡುತ್ತಿದೆ. ಅವರ ನಿರ್ದಿಷ್ಟವಾದ ಕೆಲಸ ಏನು ಎಂಬುದನ್ನು ದಯಮಾಡಿ ತಿಳಿಸಿ.

ಶ್ರೀ ಎನ್. ಚಿಕ್ಕೇಗೌಡ.— ಅಗ್ರಿಕಲ್ಚರಲ್ ಸೀಡ್ ಕಾರ್ಪೊರೇಷನ್ ಮಾಡುವ ಕೆಲಸ ಏನೆಂದರೆ ಇವರು ಬಿತ್ತನೆ ಬೀಜಗಳನ್ನು ಹಂಚಿಕೆ ಮಾಡುತ್ತಾರೆ. ಕೊಟ್ಟಿರತಕ್ಕಂಥ 1 ಕೋಟಿ, 2 ಕೋಟಿ ರೂಪಾಯಿ ಸಾಲ ವಸೂಲು ಮಾಡತಕ್ಕಂಥಾದ್ದು ಆಗಬೇಕು. ಈ ಒಂದು ಸಂಸ್ಥೆಯ ಮುಖೇನ ಕೊಟ್ಟಿದ್ದ ಕೆಲಸವನ್ನು ಪೂರೈಸಿದ್ದಾರೆ ಇದರ ಅಗತ್ಯ ಮತ್ತೆ ಇದೆಯೇ ಇಲ್ಲವೇ ಎಂಬ ಅರಿವು ಆದಕಾಲದಲ್ಲಿ ಇದನ್ನು ಇಟ್ಟುಕೊಳ್ಳಬೇಕೇ ಅಥವಾ ಎರಡೂ ಸಂಸ್ಥೆಗಳನ್ನೂ ಇಟ್ಟುಕೊಳ್ಳಬೇಕೇ ಎನ್ನುವ ವಿಷಯವನ್ನು ಸರ್ಕಾರ ಪರಿಶೀಲಿಸುತ್ತದೆ.

MADAM SPEAKER.— Question No. 641, 557 and 691 are all head over. They stand in the name of the Minister for food and civil supplies.